| | |
|---|---|
| 5. ತಿಪಟೂರು | 22. ಭಟ್ಕಳ |
| 6. ಮುಳಬಾಗಿಲು | 23. ಇಳಕಲ್ |
| 7. ಮಾಲೂರು | 24. ಇಂಡಿ |
| 8. ಗೌರಿಬಿದನೂರು | 25. ಮಹಾಲಿಂಗಪುರ |
| 9. ಹಿರಿಯೂರು | 26. ಸಿಂಧಗಿ |
| 10. ಸಾಗರ | 27. ಹಾನಗಲ್ |
| 11. ಸಕಲೇಶಪುರ | 28. ಅಣ್ಣಿಗೇರಿ |
| 12. ಅರಸೀಕೆರೆ | 29. ಲಕ್ಷ್ಮೇಶ್ವರ |
| 13. ಮಡಿಕೇರಿ | 30. ಆಳಂದ |
| 14. ಬೀರೂರು | 31. ಸೋರಾಪುರ |
| 15. ಕಾರ್ಕಳ | 32. ಯಾದಗೀರ್ |
| 16. ಕುಂದಾಪುರ | 33. ಸಿಂಧನೂರು |
| 17. ಮೂಡಬಿದ್ರೆ | 34. ಭಾಲ್ಕಿ |

(ಆ) ಹೌದು

(ಇ) ಪ್ರಸ್ತಾವನೆ ಬಂದಿದೆ

(ಈ) ಸದರಿ ಪ್ರಸ್ತಾವನೆಯನ್ನು 2000-2001ನೇ ಸಾಲಿನ ಸಾರ್ವತ್ರಿಕ ವರ್ಗಾವಣೆ ಸಮಯದಲ್ಲಿ ಪರಿಗಣಿಸುವ ಬಗ್ಗೆ ಪರಿಶೀಲಿಸಲಾಗುತ್ತದೆ.

## PRODUCTION OF SILK IN THE STATE

**1613 (1877) : Sri H. M. Chandrashekarappa (Shimoga) :** Will the Minister for Sericulture and Textile be pleased to state

(A) What is the expenditure incurred during the last years for the production of silk in the State

(B) What is the number of CRC's in Shimoga District; Whether they are functioning properly?

**Sri M. Mahadev (Minister for Sericulture & Textile) :**

(A) Details are furnished in the Annexure.

(B) There are 26 CRC's in Shimoga District out of Which 25 CRC's are working satisfactorily. The Details of layings brushed and cocoons harvested are mentioned below:

| Year | layings brushed | Cocoon harvested |
|---|---|---|
| 1997-98 | 1.86 lakhs | 69.000 M. Ts |
| 1998-99 | 1.62 lakhs | 62.204 M. Ts |
| 1999-2000 | 1.45 lakhs | 64.500 M. Ts |

**ಅಥಣಿ ತಾಲ್ಲೂಕನ್ನು ಬೂದು ಪ್ರದೇಶವೆಂದು ಪ್ರಕಟಿಸುವ ಬಗ್ಗೆ**

**1614 (1884) :** ಶ್ರೀ ಡಿ.ಎಸ್. ಇಸ್ಮಾಯಿಲ್ (ಅಥಣಿ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಅಥಣಿ ತಾಲ್ಲೂಕನ್ನು ಬೂದು ಪ್ರದೇಶವೆಂದು ಪ್ರಕಟಿಸಿರುವುದು ನಿಜವಲ್ಲವೇ;

(ಆ) ಹಾಗಿದ್ದಲ್ಲಿ, ಈ ಪ್ರದೇಶವನ್ನು ಬೂದು ಪ್ರದೇಶ ಎಂಬ ಘೋಷಣೆಯಿಂದ ಎಂದು ಮುಕ್ತಗೊಳಿಸಲಾಗುವುದು?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

(ಅ) ಹೌದು

(ಆ) ರಾಜ್ಯದಾದ್ಯಂತ ನೀರಾವರಿ ಬಾವಿ:ಕೊಳವೆ ಬಾವಿಗಳಿಂದ ಅಂತರ್ಜಲವನ್ನು ಹೇರಳವಾಗಿ ಬಳಕೆ ಮಾಡುತ್ತಿದ್ದು, ಜಲಮಟ್ಟವು ಇಳಿಕೆಯಾಗುತ್ತಿರುವುದು ಕಂಡುಬಂದಿದೆ. ಆದ್ದರಿಂದ, ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಪ್ರತಿ 5 ವರ್ಷಕ್ಕೊಮ್ಮೆ ಅಂತರ್ಜಲದ ಸ್ಥಿತಿಗತಿಯನ್ನು ಅರಿಯಲು ಪುನರ್ ಮೌಲೀಕರಣ ಕಾರ್ಯಕ್ರಮವನ್ನು ಹಮ್ಮಿಕೊಂಡು ಲೆಕ್ಕಾಚಾರ ಮಾಡಿ ಒಂದು ವರದಿಯನ್ನು ಹೊರತರುತ್ತಿದೆ. ಅದರಂತೆ, 31-12-1994ರ ಅಂತ್ಯಕ್ಕೆ ಅಥಣಿ ತಾಲ್ಲೂಕಿನಲ್ಲಿ ಅಂತರ್ಜಲವನ್ನು ಯಥೇಚ್ಛವಾಗಿ ಬಳಕೆ ಮಾಡಿದ್ದರಿಂದ ಆ ತಾಲ್ಲೂಕನ್ನು "ಬೂದು" ಪ್ರದೇಶವೆಂದು ನಬಾರ್ಡ್ ಸಂಸ್ಥೆಯವರು ಘೋಷಿಸಿದ್ದರು. ಈಗ, ಮತ್ತೆ ಇಲಾಖೆಯು 1999ನೇ ಸಾಲಿನ ಅಂತ್ಯಕ್ಕೆ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿ ಪುನರ್ ಮೌಲೀಕರಣವನ್ನು ಮಾಡುತ್ತಿದ್ದು, ಮೌಲೀಕರಣ ಕಾರ್ಯ ಪ್ರಗತಿಯಲ್ಲಿದೆ. ಮೌಲೀಕರಣ ಪೂರ್ಣಗೊಂಡ ನಂತರ ವರದಿಯನ್ನು ನಬಾರ್ಡ್ ಸಂಸ್ಥೆಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗುವುದು.